ಆರ್ ಬಿ ಐ/2008-2009/91 ಜುಲೈ 09, 2008
ಆರ್.ಪಿಸಿ.ಡಿ. ಸಿಒ. ಆರ್.ಎಫ್.ನಂ. ಬಿಸಿ. 1/07.06.00/2008-2009 18 ಆಶಾಢ, ಶಕ 1930

-ಗೆ,
ಎಲ್ಲ ರಾಜ್ಯ ಮತ್ತು ಕೇಂದ್ರ ಸಹಕಾರಿ ಬ್ಯಾಂಕುಗಳು,

ಮಾನ್ಯರೆ,

**ದೃಷ್ಟಿಮಾಂದ್ಯರಿಗೆ ಬ್ಯಾಂಕಿಂಗ್ ಸೌಲಭ್ಯಗಳು**

ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆಯುವಲ್ಲಿ, ದೃಷ್ಟಿಮಾಂದ್ಯರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ರಿಸರ್ವ್ ಬ್ಯಾಂಕಿನ ಗಮನಕ್ಕೆ ತರಲಾಗಿದೆ. ಚೆಕ್ ಪುಸ್ತಕ ಸೌಲಭ್ಯ/ಎಟಿಎಮ್/ಲಾಕರ್‌ಗಳ ನಿರ್ವಹಣೆ ಇತ್ಯಾದಿಗಳನ್ನೊಳಗೊಂಡ ಯಾವುದೇ ಬ್ಯಾಂಕಿಂಗ್ ಸೌಲಭ್ಯಗಳನ್ನು ದೃಷ್ಟಿಮಾಂದ್ಯರಿಗೆ ನಿರಾಕರಿಸುವಂತಿಲ್ಲ; ಯಾಕೆಂದರೆ ಕಾನೂನಿನನ್ವಯ ವ್ಯವಹಾರ ನಡೆಸಲು ದೃಷ್ಟಿಮಾಂದ್ಯರು ಸಮರ್ಥರಾಗಿರುತ್ತಾರೆ.

**2**. ಮೊಕದ್ದಮೆ ಸಂಖ್ಯೆ 2791/2003 ಯಲ್ಲಿ ವಿಕಲಾಂಗ ವ್ಯಕ್ತಿಗಳ ಮುಖ್ಯ ಕಮಿಷನರ್‌ರವರ ಗೌರವಾನ್ವಿತ ನ್ಯಾಯಾಲಯವು, ದಿನಾಂಕ 05.09.2005 ರಂದು ಹೊರಡಿಸಿದ (ಪ್ರತಿಯನ್ನು ಲಗತ್ತಿಸಲಾಗಿದೆ) ಆಜ್ಞೆಯಲ್ಲಿ, ದೃಷ್ಟಿಮಾಂದ್ಯರಿಗೆ ಚೆಕ್ ಪುಸ್ತಕ ಸೌಲಭ್ಯ/ಎಟಿಎಮ್/ಲಾಕರ್‌ಗಳ ನಿರ್ವಹಣೆ ಇತ್ಯಾದಿಗಳನ್ನೊಳಗೊಂಡ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡುವುದಲ್ಲದೆ ನಗದನ್ನು ಪಡೆಯಲು ಅವರಿಗೆ ಸಹಕರಿಸಬೇಕೆಂದು ಎಲ್ಲ ಬ್ಯಾಂಕುಗಳಿಗೆ ಸೂಚಿಸಿದೆ. ಇತರೆ ಗ್ರಾಹಕರ ವಿಷಯದಲ್ಲೂ ಸಂಭಾವ್ಯನಷ್ಟ ಒಳಗೊಂಡಿರುವುದರಿಂದ, ದೃಷ್ಟಿ ಹಾನಿಯಾದ ವ್ಯಕ್ತಿಗಳಿಗೆ ಚೆಕ್ ಪುಸ್ತಕ ಸೌಲಭ್ಯ/ಎಟಿಎಮ್/ಲಾಕರ್‌ಗಳ ಸೌಲಭ್ಯವನ್ನು, ನಿರ್ವಹಣೆಯಲ್ಲಿನ / ಸದರಿ ಸೌಲಭ್ಯವನ್ನು ಬಳಸುವಲ್ಲಿ ಸಂಭವಿಸಬಹುದಾದ ನಷ್ಟದ ಅಧಾರದ ಮೇಲೆ ನಿರಾಕರಿಸುವಂತಿಲ್ಲ ಎಂದು ಮೇಲಿನ ಆಜ್ಞೆಯ ಪ್ಯಾರ 14 ರಲ್ಲಿ, ಮಾನ್ಯ ನ್ಯಾಯಾಲಯವು ಸೂಚಿಸಿದೆ.

**3. ಅದ್ದರಿಂದ ಬ್ಯಾಂಕುಗಳು, ಮೂರನೇ ವ್ಯಕ್ತಿ ಚೆಕ್‌ಗಳೂ ಸೇರಿದಂತೆ ಚೆಕ್ ಪುಸ್ತಕ ಸೌಲಭ್ಯ, ಎಟಿಎಮ್ ಸೌಲಭ್ಯ, ನೆಟ್ ಬ್ಯಾಂಕಿಂಗ್ ಸೌಲಭ್ಯ, ಲಾಕರ್ ಸೌಲಭ್ಯ. ಚಿಲ್ಲರೆ ಸಾಲಗಳು, ಕ್ರೆಡಿಟ್ ಕಾರ್ಡುಗಳು ಇತ್ಯಾದಿಯಂತಹ ಎಲ್ಲ ಬ್ಯಾಂಕಿಂಗ್ ಸೌಲಭ್ಯಗಳನ್ನು ಯಾವುದೇ ಪಕ್ಷಪಾತವಿಲ್ಲದೆ ದೃಷ್ಟಿಮಾಂದ್ಯರಿಗೆ ತಪ್ಪದೇ ನೀಡಿರುವುದನ್ನು ಖಚಿತಪಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.** ವಿವಿಧ ಬ್ಯಾಂಕಿಂಗ್ ಸೌಲಭ್ಯಗಳನ್ನು ದೃಷ್ಟಿಮಾಂದ್ಯರು ಪಡೆಯುವಂತಾಗಲು ಅವರಿಗೆ ಎಲ್ಲ ರೀತಿಯ ಸಹಾಯವನ್ನೊದಗಿಸಲು ಬ್ಯಾಂಕುಗಳು ತಮ್ಮ ಶಾಖೆಗಳಿಗೆ ಸೂಚಿಸಬಹುದಾಗಿದೆ.

ನಿಮ್ಮ ವಿಶ್ವಾಸಿ,

(ಜಿ. ಶ್ರೀನಿವಾಸನ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು - ಪ್ರಭಾರಿ